# ಜೀವ ಯಾವ ಕುಲ?

ಹರಿದಾಸ ಸಾಹಿತ್ಯ ಪರಂಪರೆಯ ಉತ್ತುಂಗ ದಿನಗಳ ನಡುವೆ ಬಂದ ಕನಕರು ವಿಶಿಷ್ಟ ಕಾವ್ಯ ಪ್ರತಿಭೆ. ವಚನಕಾರರು ಮತ್ತು ತತ್ತ್ವಪದಕಾರರಂತೆ ಉದಾತ್ತ ಸಾಮಾಜಿಕ ಮತ್ತು ಉನ್ನತ ಆಧ್ಯಾತ್ಮಿಕ ನಿಲುವುಗಳನ್ನು ಹೊಂದಿರುವ ಸಾಧಕ ಕವಿ. ಅವರ ಕೀರ್ತನೆಗಳು ಹಾಗೂ ತತ್ತ್ವಪದಗಳು ಮಧ್ಯಕಾಲಿನ ಕನ್ನಡ ಸಾಹಿತ್ಯ ಚರಿತ್ರೆಯ ಮೇಲೆ ಸಾಹಿತ್ಯಕವಾಗಿ ಮತ್ತು ಸಾಮಾಜಿಕವಾಗಿ ಹೊಸಬೆಳಕನ್ನು ಚೆಲ್ಲುತ್ತವೆ.

ಕನಕದಾಸರ ಪುರಾಣ ಪ್ರಜ್ಞೆ ಅಸದಳವಾದದ್ದು. 20ನೇ ಶತಮಾನದ ಕುವೆಂಪು ಅವರಂತೆ ಕನಕದಾಸರು 'ರಾಮಾಯಣ' ಮತ್ತು 'ಮಹಾಭಾರತ' ಮಹಾಕಾವ್ಯಗಳನ್ನು ಹೊಸಗ್ರಹಿಕೆಯಿಂದ ಕಟ್ಟುವ ಕಲೆಯನ್ನು ವಿಶಿಷ್ಟರೀತಿಯಲ್ಲಿ ತೋರಿದ್ದಾರೆ. ಸಾಮಾನ್ಯವಾಗಿ ಹರಿದಾಸರು 'ರಾಮಾಯಣ' ಮತ್ತು 'ಮಹಾಭಾರತ'ದ ಕಾವ್ಯವನ್ನು ದೈವಿಕ ಶ್ರದ್ಧೆಯಿಂದ ಏಕಮುಖವಾಗಿ ಸ್ತುತಿಸುವುದೇ ಹೆಚ್ಚು. ಅವರ ನಡುವೆ ಕನಕದಾಸರು ಜನಪ್ರಿಯ ಮಹಾಕಾವ್ಯಗಳನ್ನು ಕುರಿತು ಮರುವ್ಯಾಖ್ಯಾನಿಸಿರುವ ರೀತಿಯೇ ಗಮನಾರ್ಹವಾದುದು. 'ಬರಿದೆ ದೂರು ಬಂದಿದೆ ಪಾಂಡವರಿಗೆ' ಮತ್ತು 'ಆರು ಬದುಕಿದರಯ್ಯ ಹರಿ ನಿನ್ನ ನಂಬಿ' ಎಂಬ ರಚನೆಗಳು ಇವರ ಪ್ರತಿಭೆಗೆ ಸಾಕ್ಷಿಯಾಗಿವೆ. 'ರಾಮಧಾನ್ಯ ಚರಿತೆ' ಕನ್ನಡ ಸಾಹಿತ್ಯ ಪರಂಪರೆಯಲ್ಲಿಯೇ ಉಜ್ವಲವಾದ ಕೃತಿ. ಜನಸಾಮಾನ್ಯರ ಆಹಾರದ ಮೂಲಕವೇ ವರ್ಗಸಂಘರ್ಷದ ಬಹುದೊಡ್ಡ ಭಿತ್ತಿಯನ್ನು ಒಳಗೊಂಡಿರುವ 'ರಾಮಧಾನ್ಯ ಚರಿತೆ' ಕನಕದಾಸರ ಕಾವ್ಯಪ್ರತಿಭೆ, ಕಲ್ಪನೆ ಹಾಗೂ ಅವರ ಸಾಮಾಜಿಕ ನಿಲುವನ್ನು ಅತ್ಯಂತ ಸಮರ್ಥವಾಗಿ ತೆರೆದಿಡುವ ಕಾವ್ಯ.

ಕನಕರ ಎಲ್ಲ ರಚನೆಗಳು ಕೀರ್ತನ ಸಾಹಿತ್ಯದ ಚೌಕಟ್ಟನ್ನು ಮೀರಿ ತತ್ತ್ವಪದಕಾರರಂತೆ ಮತ–ಪಂಥಗಳಾಚೆಗೆ ಜಿಗಿದು ಉನ್ನತವಾದ ಸಾಮಾಜಿಕ ಪರಿವರ್ತನೆಯ ನಿಲುವುಗಳನ್ನು ಹೊಂದಿವೆ. ಇಂತಹ ಉದಾರವಾದಿ ಚಿಂತನೆಗಳೇ ಸಮಾಜವನ್ನು ರಕ್ಷಿಸುವ ಹೊದಿಕೆಗಳೆಂದು ಗಾಢವಾಗಿ ತಿಳಿದು ಕಾರ್ಯಪ್ರವೃತ್ತರಾಗಿದ್ದವರು ಕನಕರು. ಈ ಕವಿ ಪ್ರಭುತ್ವದ ಟೊಳ್ಳುತನ ಮತ್ತು ವೈದಿಕ ಅಧ್ಯಾತ್ಮದ ಶಿಥಿಲತೆಯನ್ನು ಹತ್ತಿರದಿಂದ ಕಂಡವರು.

ಈ ಕಾಲಘಟ್ಟದಲ್ಲಿ ಬಂದ ಇತರ ವೈಷ್ಣವ ಪಂಥಾನುಯಾಯಿಗಳಾದ ಹರಿದಾಸ ಕವಿಗಳಿಗೆ ಹೋಲಿಸಿದರೆ ಕನಕರದು ತೀವ್ರ ಪರಿವರ್ತನೆಯ ಬಂಡಾಯದ ಮಾರ್ಗ. ಇದು ನಿಷ್ಠುರ ಮತ್ತು ಸಂಪ್ರದಾಯನಿಷ್ಠ ಮೇಲು ಜಾತಿಗಳ ರೂಢಿಗತ ನಂಬಿಕೆ, ಜಾತಿಪದ್ಧತಿಯ ಆಚರಣೆಗಳ ವಿರುದ್ಧದ ಪ್ರತಿರೋಧದ ಧ್ವನಿ. ಹರಿದಾಸ ಕವಿಗಳ ಒಟ್ಟು ಅಭಿವ್ಯಕ್ತಿಗಳಲ್ಲಿ ಸೌಮ್ಯತೆ, ಸಂಪ್ರದಾಯಬದ್ಧ ನಂಬಿಕೆಗಳ ಬಗೆಗಿನ ಪ್ರಶ್ನೆಗಳಿಲ್ಲದ ಒಪ್ಪಿಗೆ, ಆರಾಧ್ಯ ದೈವವನ್ನು ಕೀರ್ತಿಸುವ ಭಾವನೆಗಳು ಮುನ್ನೆಲೆಯಲ್ಲಿರುತ್ತವೆ. ಆದರೆ ಯಾವುದೇ ಮತಧರ್ಮದ ಅಧೀನಕ್ಕೊಳಪಡದ ಕನಕರ ರಚನೆಗಳಲ್ಲಿ ಈ ಬಗೆಯ /ಸೌಮ್ಯೋಕ್ತಿಗಳು ವಿರಳ! ಕನಕದಾಸರ ಸಾಹಿತ್ಯಕ ರೂಪಗಳಲ್ಲಿ ಬೌದ್ಧಿಕ ತಿಳಿವು, ಲೋಕಗ್ರಹಿಕೆ ಮತ್ತು ಪ್ರತಿಮಾ ವಿಧಾನಗಳು ಎಲ್ಲರಿಗಿಂತ ಭಿನ್ನವಾಗಿವೆ. 'ವೇದ ಶಾಸ್ತ್ರ ಪುರಾಣವೆಂತೆಂಬ ಶ್ವಾನಗಳು' / 'ತೀರ್ಥವ ಪಿಡಿದವರೆಲ್ಲ ತಿರುನಾಮಧಾರಿಗಳೆ / ಜನ್ಮ ಸಾರ್ಥಕವಿಲ್ಲವರೆಲ್ಲ ಭಾಗವತರೆ' / ವೇದ ಶಾಸ್ತ್ರ ಪಂಚಾಂಗ ಓದಿಕೊಂಡು ಪರರಿಗೆ / ಬೋಧನೆಯ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ' / 'ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ / ಕುಲದ ನೆಲೆಯನೇನಾದರು ಬಲ್ಲಿರ' / 'ಆತ್ಮ ಯಾವ ಕುಲ ಜೀವ ಯಾವ ಕುಲ' ಎಂದು ಸಾಮಾಜಿಕ ವಾಸ್ತವದ ರುದ್ರ ರೂಪಗಳ ಬಗ್ಗೆ ಇವರ ರಚನೆಗಳು ಕನಲುತ್ತವೆ. ಹೀಗಾಗಿಯೇ ಸಾಮಾಜಿಕ ಮತ್ತು ಧಾರ್ಮಿಕ ವಿಕಾರಗಳನ್ನು ಬಯಲಿಗೆಳೆಯುವ ಕನಕರ ರಚನೆಗಳು ಮಧ್ಯಕಾಲಿನ ಸಾಹಿತ್ಯ ಪರಂಪರೆಯಲ್ಲಿ ವಿಶಿಷ್ಟ ಧ್ವನಿಯಾಗಿ ಕಾಣಿಸುತ್ತವೆ.

ಜಾತಿ ಮತ್ತು ವೈದಿಕ ಸಂಪ್ರದಾಯಗಳ ವಿರುದ್ಧದ ಬಂಡಾಯ ಮಧ್ಯಯುಗೀನ ಭಾರತದ ದೇಶಭಾಷೆಗಳಲ್ಲಿ ಪ್ರಕಾಶಕಂಡ ಸಂತರ ಅಭಿವ್ಯಕ್ತಿಗಳಲ್ಲಿ ಉಕ್ಕುವ ಪ್ರವಾಹದಂತೆ ಹರಿದಿದೆ. ಆಶ್ಚರ್ಯದ ಮಾತೆಂದರೆ ಈ ಸಂತರೆಲ್ಲ ಬಹುಪಾಲು ಅತಿಹಿಂದುಳಿದ ಕೆಳಜಾತಿ ಮತ್ತು ಅಸ್ಪೃಶ್ಯರ ಅಂಗಳದಿಂದಲೇ ಬಂದವರು. ಈ ಹಿನ್ನೆಲೆಯಲ್ಲಿ ಕೆಳಜಾತಿಯಿಂದ ಬಂದ ಕನಕದಾಸರು ತಮ್ಮ ಕಾಲದ ಸಮಾಜವನ್ನು ರೂಪಿಸುತ್ತಿದ್ದ ವೈದಿಕ ತಾತ್ವಿಕ ಪರಿಕಲ್ಪನೆಗಳ ವಿರೋಧಿಯಾಗಿ ರೂಪುಗೊಂಡಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ! ಇವರು ತಮ್ಮೊಳಗೆ ಕರಗಿಸಿಕೊಂಡಿದ್ದ ಚಿಂತನೆಗಳು, ಇವರ ರಚನೆಗಳು ರೂಪಕ ಮತ್ತು ಪ್ರತಿಮೆಗಳೊಂದಿಗೆ ಐಕ್ಯಗೊಂಡು ನಿಜವಾದ ಧರ್ಮವನ್ನು ಅದರ ಪರಿಶುದ್ಧ ರೂಪದಲ್ಲಿ ಪುನಶ್ಚೇತನಗೊಳಿಸುವಲ್ಲಿ ನಿರತವಾಗಿದ್ದವು. ಮುಖ್ಯವಾಗಿ ಕನಕರ ರಚನೆಗಳಲ್ಲಿ ಸಾಮಾಜಿಕ ಪ್ರತಿರೋಧದ ಧ್ವನಿಯು ಅಂತಿಮವಾಗಿ ಸರ್ವಸಮಾನತೆಯ ಮಹಾದರ್ಶನದ ರೂಪು ಪಡೆಯುತ್ತದೆ. ಈ ಕಾರಣಕ್ಕಾಗಿಯೇ ಕನಕರು ಹರಿದಾಸ ಪರಂಪರೆಯ ಕವಿಗಳ ಸಮುಚ್ಚಯದಲ್ಲಿ ಪ್ರತ್ಯೇಕವಾಗಿ ನಿಲ್ಲುತ್ತಾರೆ.

ಸಾಮಾಜಿಕ ಪ್ರತಿರೋಧದ ಪರಂಪರೆಯಲ್ಲಿ ಎರಡು ದಾರಿಗಳಿವೆ. ಒಂದು: ಕಠೋರ ಮತ್ತು ನಿಷ್ಠುರ ವಿಮರ್ಶೆಯ ದಾರಿ. ಇನ್ನೊಂದು ಪ್ರೇಮಭಾವದಿಂದ ತುಂಬಿದ ಸೌಮ್ಯ ಸ್ವರೂಪದ್ದು. ಅಂತಿಮವಾಗಿ ಈ ಎರಡೂ ಚಿಂತನೆಗಳು ನೀಡುವುದು ಬೆಳಕನ್ನೆ. ಇದರಲ್ಲಿ ಕನಕದಾಸರದ್ದು ಮೊದಲನೆಯ ದಾರಿ. ಇವರು ಬಂದ ಸಾಮಾಜಿಕ ಹಿನ್ನೆಲೆ. ಶ್ರೇಣೀಕೃತ ಜಾತಿ ವ್ಯವಸ್ಥೆಯಲ್ಲಿ ಹೆಚ್ಚು ನಲುಗಿದ, ಅಪಮಾನಗೊಂಡ ಸಮುದಾಯಗಳೆಂದರೆ ದುರ್ಬಲ ಜಾತಿಗಳು ಮತ್ತು ಅಸ್ಪೃಶ್ಯರು. ಆದ್ದರಿಂದಲೇ ಅತ್ಯಂತ ಕೆಳವರ್ಗದಿಂದ ಬಂದ ಸಂತರಿಂದ ಮೊದಲುಗೊಂಡು ಕನಕರು ಮತ್ತು ಅಂಬೇಡ್ಕರ್‌ವರೆಗಿನ ಎಲ್ಲ ಸಾಮಾಜಿಕ ಪರಿವರ್ತನಾವಾದಿಗಳು ಮೊದಲು ಪ್ರಶ್ನಿಸುವುದು ಭಾರತೀಯ ಸಮಾಜದಲ್ಲಿ ಮನುಷ್ಯರ ನಡುವಿನ ತರತಮ ಭಾವಗಳಿಗೆ ಕಾರಣವಾದ ಜಾತಿಪದ್ಧತಿಯನ್ನೇ. ಆದ್ದರಿಂದಲೇ ಇವರ ರಚನೆಗಳು 'ಆತ್ಮ ಯಾವ ಕುಲ, ಜೀವ ಯಾವ ಕುಲ' ಎಂದು ಸಮಾಜವನ್ನು ಪ್ರಶ್ನಿಸುತ್ತವೆ.

ಬೆಡಗಿನ ವಚನಗಳ ರೂಪಗಳು ವಚನಕಾರರು ಮತ್ತು ತತ್ತ್ವಪದಕಾರರ ರಚನೆಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ. ರೂಪಕ, ಪ್ರತಿಮಾ ಸೃಷ್ಟಿ, ಅನ್ಯೋಕ್ತಿ ವಿಧಾನದ ಪರಂಪರೆ ಕನಕರ ರಚನೆಗಳವರೆಗೂ ತನ್ನನ್ನು ವಿಸ್ತರಿಸಿಕೊಂಡಿದೆ. ಕನಕರಲ್ಲಿರುವ ಈ ಬಗೆಯ ರಚನೆಗಳನ್ನು ಮುಂಡಿಗೆಗಳು ಎಂದು ಕರೆದಿದ್ದಾರೆ. ಇಂತಹ ರಚನೆಗಳಲ್ಲಿ ದುರ್ಬಲವಾದದ್ದು ಪ್ರಬಲವಾದದ್ದನ್ನು ಮಣಿಸುತ್ತದೆ. ಇದೆಲ್ಲ ಕಾಡಿನ ಖಗ–ಮೃಗಗಳ ರೂಪಕಗಳಲ್ಲಿ ಕಾಣಿಸಿಕೊಳ್ಳುತ್ತದೆ. ಕನಕ ಮತ್ತು ಪ್ರಭುದೇವರ ರಚನೆಗಳಲ್ಲಿ ಇದು ಪ್ರಕಟಗೊಂಡಿದೆ. ಈ ಅರ್ಥದಲ್ಲಿ ಕನಕರ ಒಟ್ಟು ತತ್ತ್ವಪದಗಳು ಒಳಗೂ 'ಕನಕ' ಹೊರಗೂ 'ಕನಕ'.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಕೊಲ್ಲಲು ಬಂದ ಅನ್ಯಭಾಷೆಗಳು ವಾತಾಪಿಗಳು ಉಂಡು ಬೆಳೆದಿದೆ ಕನ್ನಡ ಅಗಸ್ತ್ಯನಂತೆ ಎಲ್ಲವ ಜೀರ್ಣಿಸಿಕೊಂಡು.
  —ಬಿ.ಆರ್. ಲಕ್ಷ್ಮಣರಾವ್
- ರಸರುಚಿ ಬಲ್ಲವ ತಿಂಡಿಪೋತನಾಗಲಾರ.
  —ಎಪಿಕ್ಯೊರಾಸ್
- ಅಳಿಲು ಏರಿದರೆ ಅರಳಿಮರ ಅಲ್ಲಾಡೀತೆ!
  —ಗಾದೆ
- ಮರ್ತ್ಯದಲ್ಲಿ ನಿಂತು ಗೆಲ್ಲು, ಮರ್ತ್ಯವೇ ಒರೆಗಲ್ಲು.
  —ವಿ.ಕೃ. ಗೋಕಾಕ
- ನಿರ್ಭಯವೂ ನಿಷ್ಪಕ್ಷಪಾತವೂ ಆದ ಜಗತ್ತಿನ ಅನ್ವೇಷಣೆಯೇ ವಿಜ್ಞಾನ.
  —ಸಿ.ವಿ. ರಾಮನ್
- ಪಡೆಯುವಷ್ಟನ್ನೇ ಪಡೆದರೆ ತೃಪ್ತಿ. ಅದಕ್ಕಿಂತಲೂ ಹೆಚ್ಚಿಗೆ ಪಡೆದರೆ ಬಹಳ ಹೊರೆ, ದುಃಖ.
  —ರವೀಂದ್ರನಾಥ ಟ್ಯಾಗೋರ್
- ಪ್ರಾಮಾಣಿಕರಿಗೆ ಜೀವನವೇ ಹೋರಾಟ. ಆದರೂ ಅದರಿಂದ ವಿಮುಖರಾಗದೆ ಹೋರಾಡಬೇಕು.
  —ಸ್ವಾಮಿ ವಿವೇಕಾನಂದ